**ಕರ್ನಾಟಕ ಸರ್ಕಾರ**

**ಜಿಲ್ಲಾಧಿಕಾರಿಯವರ ಕಾರ್ಯಾಲಯ, ಜಿಲ್ಲಾ ಸಂಕೀರ್ಣ, ರಾಮನಗರ ಜಿಲ್ಲೆ, ರಾಮನಗರ**

---

**ರಾಜಿಕಾ/ಇಎಸ್‌ಟಿ/ಸಿಆರ್/184/2016-17** **ದಿನಾಂಕ:28-08-2017**

## ಪರಿಷ್ಕೃತ ಅಧಿಸೂಚನೆ

**ವಿಷಯ:** ರಾಮನಗರ ಜಿಲ್ಲೆಯ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ (ಮೆರಿಟ್ ಆಧಾರದ ಮೇಲೆ) ಆಯ್ಕೆ ಮಾಡುವ ಬಗ್ಗೆ

**ಉಲ್ಲೇಖ:**
1. ಈ ಕಛೇರಿ ಸಮಸಂಖ್ಯೆ ಅಧಿಸೂಚನೆ ದಿನಾಂಕ:20-07-2017
2. ಅಭ್ಯರ್ಥಿಗಳ ಮನವಿ ದಿನಾಂಕ:26-08-2017

<<<<>>>>

ರಾಮನಗರ ಜಿಲ್ಲೆಯ ಕಂದಾಯ ಘಟಕದಲ್ಲಿ ಖಾಲಿ ಇರುವ 86 ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಆಯ್ಕೆ ಮಾಡಲು ಉಲ್ಲೇಖ(1)ರನ್ವಯ ಅಧಿಸೂಚನೆ ಹೊರಡಿಸಿದ್ದು, ಈ ಸಂಬಂಧ ಅಭ್ಯರ್ಥಿಗಳು ದಿನಾಂಕ:27-07-2017 ರಿಂದ 26-08-2017 ರವರೆಗೆ ಅರ್ಜಿ ಶುಲ್ಕವನ್ನು ಜಿಲ್ಲಾಧಿಕಾರಿಗಳ ಎಸ್.ಬಿ.ಐ. ಉಳಿತಾಯ ಖಾತೆ ಸಂಖ್ಯೆ:64052680679 ಗೆ ಪಾವತಿಸಲು ಕ್ರಮಕೈಗೊಳ್ಳಲಾಗಿರುತ್ತದೆ.

ಆದರೆ ಎಸ್‌ಬಿ.ಐ. ಬ್ಯಾಂಕಿನ ತಾಂತ್ರಿಕ ದೋಷದಿಂದಾಗಿ ಅರ್ಜಿ ಶುಲ್ಕವನ್ನು ಬ್ಯಾಂಕಿಗೆ ಪಾವತಿಸಲು/ ಜಮಾ ಮಾಡಲು ಸಾಧ್ಯವಾಗುತ್ತಿರುವುದಿಲ್ಲ ಎಂದು ಆಸಕ್ತ ಅಭ್ಯರ್ಥಿಗಳು ದೂರವಾಣಿ ಮೂಲಕ ಹಾಗೂ ಉಲ್ಲೇಖ(2)ರಂತೆ ಈ ಕಛೇರಿಗೆ ಮನವಿ ಸಲ್ಲಿಸಿ ಅರ್ಜಿ ಶುಲ್ಕವನ್ನು ಪಾವತಿಸಲು ಅವಧಿ ವಿಸ್ತರಿಸಲು ಕೋರಿರುತ್ತಾರೆ.

ಆದ್ದರಿಂದ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿ, ಅಭ್ಯರ್ಥಿಗಳ ಹಿತದೃಷ್ಟಿಯಿಂದ ಈಗಾಗಲೇ ನಿಗಧಿತ ಅವಧಿಯಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಮಾತ್ರ ಬ್ಯಾಂಕ್‌ನಲ್ಲಿ ಅರ್ಜಿ ಶುಲ್ಕ ಪಾವತಿಸಿ ಆನ್‌ಲೈನ್‌ನಲ್ಲಿ ಚಲನ್ ಅಪ್‌ಲೋಡ್ ಮಾಡಲು ದಿನಾಂಕ:04/09/2017 ರವರೆಗೆ ಕಾಲಾವಕಾಶನ್ನು ವಿಸ್ತರಿಸಿ ಆದೇಶಿಸಿದೆ.

28/8/17

(ಕ.ಟಿ.ಜಿ.ಆ)

**ಅಪರ ಜಿಲ್ಲಾಧಿಕಾರಿ**
**ರಾಮನಗರ ಜಿಲ್ಲೆ, ರಾಮನಗರ**

**ಪ್ರತಿಯನ್ನು:**

1. ಜಿಲ್ಲಾ ಸೂಚನಾ ವಿಜ್ಞಾನ ಅಧಿಕಾರಿ, ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ, ರಾಮನಗರ ಜಿಲ್ಲೆ ರವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
2. ಶಾಖಾ ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ರಾಮನಗರ ಶಾಖೆ ರವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ಕಛೇರಿ ಪ್ರತಿ